**ಕರ್ನಾಟಕ ಸರಕಾರ**

ಸಂ:ಬಿಜಿಎಂ:ಡಿಯುಡಿಸಿ:ಯುಪಿಎಸಿ:ಸಿಆರ್:1:2012–13

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ನಗರ ಬಡತನ ನಿರ್ಮೂಲನಾ ಕೋಶ,
ಬೆಳಗಾವಿ. ದಿನಾಂಕ:30.05.2012.

**ವಿಷಯ:** ಪುರಸಭೆ ಸಂಕೇಶ್ವರ ವ್ಯಾಪ್ತಿಯಲ್ಲಿ 2012–13ನೇ ಸಾಲಿನ ಪುರಸಭೆ ಆದಾಯದಡಿ ಶೇ.7.25 ಮತ್ತು ಶೇ.3ರಡಿ ತೆಗೆದುಕೊಂಡ ಕಾರ್ಯಕ್ರಮ/ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದನೆ ಕುರಿತು.

**ಓದಿತು:**–1)ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ:415:ಜಿಇಎಲ್:2011 ದಿನಾಂಕ:27.02.2012

2)ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಸುತ್ತೋಲೆಸಂ:ಪೌನಿ:22.75:ಸುತ್ತೋಲೆ:2:2012–13 ದಿನಾಂಕ:24.04.2012

3)ಮುಖ್ಯಾಧಿಕಾರಿ, ಪುರಸಭೆ ಸಂಕೇಶ್ವರ ಇವರ ಪತ್ರ ಸಂಖ್ಯೆ: ಪುಸಸಂ: ಶೇ.7.25, 3%:2012–13/130 ದಿನಾಂಕ:26.05.2012

**ಪ್ರಸ್ತಾವನೆ:**

2012–13ನೇ ಸಾಲಿಗೆ ಸಂಕೇಶ್ವರ ಪುರಸಭೆಯು ಸರ್ಕಾರದ ಸುತ್ತೋಲೆಯ ಮಾರ್ಗಸೂಚಿಗಳನ್ವಯ ಬಾಬ್ತುಗಳನ್ನು ಹೊರತುಪಡಿಸಿ ರೂ.15.13 ಲಕ್ಷಗಳ ಆದಾಯವನ್ನು ಹೊಂದಿರುತ್ತದೆ. ಅದರಂತೆ ಓದಿತು (3)ರನ್ವಯ ಮುಖ್ಯಾಧಿಕಾರಿ, ಪುರಸಭೆ ಸಂಕೇಶ್ವರ ಇವರು ಪುರಸಭೆ ಆದಾಯದಲ್ಲಿ ಶೇ.7.25ರಷ್ಟು ನಗರದ ಇತರೆ ಬಡ ಜನರ ಕಲ್ಯಾಣ ಕಾರ್ಯಕ್ರಮಗಳಿಗೆ ರೂ.1.09 ಲಕ್ಷಗಳಲ್ಲಿ 02 ಕಾರ್ಯಕ್ರಮಗಳಿಗೆ ಹಾಗೂ ಶೇ.3%ರಷ್ಟು ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ರೂ.0.45 ಲಕ್ಷಗಳಲ್ಲಿ 01 ಕಾರ್ಯಕ್ರಮಕ್ಕೆ ಕ್ರಿಯಾ ಯೋಜನೆ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಅದರಂತೆ ಓದಿತು (1)ರ ಸರ್ಕಾರದ ಸುತ್ತೋಲೆ ಮಾರ್ಗಸೂಚಿಯಂತೆ ಪರಿಶೀಲಿಸಲಾಗಿ, ಶೇ.7.25ರಷ್ಟು ನಗರದ ಇತರೆ ಬಡಜನರ ಕಲ್ಯಾಣ ನಿಧಿಗೆ ರೂ.1.09 ಲಕ್ಷಗಳಲ್ಲಿ 02 ಕಾರ್ಯಕ್ರಮಗಳಿಗೆ ಹಾಗೂ ಶೇ.3ರಷ್ಟು ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ರೂ.0.45 ಲಕ್ಷಗಳಲ್ಲಿ 01 ಕಾರ್ಯಕ್ರಮಕ್ಕೆ ಕ್ರಿಯಾ ಯೋಜನೆ ಅನುಮೋದನೆಗೆ ಪ್ರಸ್ತಾಪಿಸಿದ್ದನ್ನು ಪರಿಗಣಿಸಲಾಗಿದೆ.

| ಕ್ರ.ಸಂ | ಕಾರ್ಯಕ್ರಮಗಳ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| *1* | *2* | *3* |
| | **ಶೇ.7.25ರ ಇತರೆ ಬಡಜನರ ಕಲ್ಯಾಣ ಕಾರ್ಯಕ್ರಮ/ಕಾಮಗಾರಿಗಳು** | |
| | **ವ್ಯಕ್ತಿ ಸಂಬಧಿತ ಅನುಕೂಲತೆಗಳು** | |
| | **ವಸತಿ** | |
| 1 | ಇತರೆ ಬಡಜನರಿಗೆ ಪಕ್ಕಾ ಮನೆ ನಿರ್ಮಾಣಕ್ಕಾಗಿ ಸಹಾಯಧನ ಒದಗಿಸುವದು. | 0.70 |
| | **ಮೂಲಸೌಕರ್ಯ** | |

| | | |
|---|---|---|
| 2 | ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಸಹಾಯಧನ ನೀಡುವದು | 0.39 |
| | **ಒಟ್ಟು** | **1.09** |
| | **ಶೇ.3ರ ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳು** | |
| | **ವ್ಯಕ್ತಿ ಸಂಬಧಿತ ಅನುಕೂಲತೆಗಳು** | |
| | **ಉದ್ಯೋಗ** | |
| | ಸಣ್ಣ ಉದ್ದಿಮೆದಾರರಿಗೆ ಸ್ವಯಂ ಉದ್ಯೋಗಕ್ಕಾಗಿ ಸಹಾಯಧನ ಒದಗಿಸುವದು. | 0.45 |
| | **ಒಟ್ಟು** | **0.45** |

**ಆದೇಶ**

ಮೇಲಿನ ಪ್ರಸ್ತಾವನೆಯಂತೆ ಪುರಸಭೆ ಸಂಕೇಶ್ವರ ವ್ಯಾಪ್ತಿಯಲ್ಲಿ 2012-13ನೇ ಸಾಲಿನ ಪುರಸಭೆ ಆದಾಯದಡಿ ಶೇ.7.25ರಷ್ಟು ನಗರದ ಇತರೆ ಬಡ ಜನರ ಕಲ್ಯಾಣ ಯೋಜನೆಯಡಿ ರೂ.1.09 ಲಕ್ಷಗಳಲ್ಲಿ 02 ಕಾರ್ಯಕ್ರಮಗಳಿಗೆ ಹಾಗೂ ಶೇ.3%ರಷ್ಟು ವಿಕಲಚೇತನರ ಕಲ್ಯಾಣ ಯೋಜನೆಯಡಿ ರೂ.0.45 ಲಕ್ಷಗಳಲ್ಲಿ 01 ಕಾರ್ಯಕ್ರಮವನ್ನು ಕೈಕೊಳ್ಳಲು ಕ್ರಿಯಾಯೋಜನೆ ಅನುಮೋದನೆ ನೀಡಿ ಓದಿತು (1) ಹಾಗೂ (2)ರ ಸರ್ಕಾರದ ಸುತ್ತೋಲೆಯ ನಿಬಂಧನೆ ಹಾಗೂ ಷರತ್ತುಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಆದೇಶಿಸಿದೆ.

**ಸಹಿ/-**
**(ವಿ. ಅನ್ಬುಕುಮಾರ)**
ಜಿಲ್ಲಾಧಿಕಾರಿಗಳು, ಬೆಳಗಾವಿ

**ಪ್ರತಿ:**ಗೌರವಾದರಗಳೊಂದಿಗೆ, ಆಯುಕ್ತರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಾದರಪಡಿಸಿದೆ.
**ಪ್ರತಿ:**ಕಾರ್ಯಪಾಲಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ.
**ಪ್ರತಿ:**ಮುಖ್ಯಾಧಿಕಾರಿಗಳು, ಪುರಸಭೆ ಸಂಕೇಶ್ವರ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಸಹಿ/-**

ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ,
ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ